Kannada Prabha

Date: 08-09-2019 | Page No: 4

Edition: Mysore | Language: Kannada

# ಎಸ್‌ಡಿಎಂ ಐಎಂಡಿ ಸಂಸ್ಥೆಯಲ್ಲಿ ಆರ್ಥಿಕ ಸಮ್ಮೇಳನ ಉದ್ಘಾಟನೆ




ಆರ್ಥಿಕ ಸಮ್ಮೇಳನವನ್ನು ಡಾ. ವೀರೇಂದ್ರ ಹೆಗ್ಗಡೆ ಉದ್ಘಾಟಿಸಿದರು.

**ಮೈಸೂರು:** ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂ ಐಎಂಡಿ ಸಂಸ್ಥೆಯಲ್ಲಿ 8ನೇ ಅಂತಾರಾಷ್ಟ್ರೀಯ ಆರ್ಥಿಕ ಸಮ್ಮೇಳನ ಆಯೋಜಿಸಲಾಗಿತ್ತು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಸಮ್ಮೇಳನ ಉದ್ಘಾಟಿಸಿ, ಕಳೆದ 20 ವರ್ಷಗಳಿಂದೀಚೆಗೆ ಗ್ರಾಮೀಣ ಮತ್ತು ನಗರಗಳ ನಡುವಿನ ಅಂತರ ಕಡಿಮೆಯಾಗಿದೆ. ಮೂಲಭೂತ ಸವಲತ್ತುಗಳಾದ ಆಹಾರ, ನೀರು, ಸಂಪರ್ಕದಿಂದಾಗಿ ಆರ್ಥಿಕವಾಗಿಪ್ರಗತಿಕಂಡಿದ್ದೇವೆ. ಮಾಹಿತಿಗಳು ಜನರನ್ನು ತಲುಪುತ್ತಿವೆ. ಶೈಕ್ಷಣಿಕ ವ್ಯವಸ್ಥೆಯೂ ಪ್ರಭಾವ ಬೀರಿದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಭಾಷಣಕಾರ ಐಐಎಂ ನಿರ್ದೇಶಕ ಭೀಮರಾಯ ಮೇತ್ರಿ ಮಾತನಾಡಿ, ಕಳೆದ 10 ವರ್ಷಗಳಲ್ಲಿ ಕೈಗಾರಿಕಾ ಕ್ರಾಂತಿಯಲ್ಲಿ ಒಂದು ಅದ್ಭುತ ಬದಲಾವಣೆ ಕಂಡಿದ್ದೇವೆ. ಇಂಡಸ್ಟ್ರಿ 1.0 ಮತ್ತು 2.0 ಎಂಬ ಉತ್ಪಾದನಾ ಹಂತಗಳಿಂದ ಇಂಡಸ್ಟ್ರಿ 4.0 ಮತ್ತು ಅದಕ್ಕಿಂತಲೂ ಮೇಲ್ಮಟ್ಟಕ್ಕೆ ಹೋಗುವ ಅವಕಾಶವಿದೆ ಎಂದು ಹೇಳಿದರು.

ಎಸ್‌ಡಿಎಂ ಐಎಂಡಿ ನಿರ್ದೇಶಕ ಡಾ. ಎನ್.ಆರ್. ಪರಶುರಾಮ್, ಡಾ.ಎಂ. ಶ್ರೀರಾಮ್ ಹಾಜರಿದ್ದರು.